ಸುಂದರರಾದ ಹೆಂಗಸರು ಪ್ರಪಂಚವನ್ನೇ ಆಳುತ್ತಾರೆ. ಅವರು ಕನಿಷ್ಠ ಅಷ್ಟು ಮಾಡಬೇಕು' ಎಂದು ಹೇಳುತ್ತಿದ್ದನು. ಹಗಿ ಚೆನ್ನಾಗಿ ಪರಿಚಯವಾದ ಮೇಲೆ ಕೂಡ, ಆತ ಅವನಲ್ಲಿದ್ದ ಚುರುಕಾದ, ಕೊನೆ ಮುಗಿಯದ ಉತ್ಸಾಹಕ್ಕೆ, ಅವನ ಧಾರಾಳತನ ಹಾಗೇ ಎಚ್ಚರಗೇಡಿ ಸ್ವಭಾವವನ್ನು ತುಂಬಾ ಇಷ್ಟಪಟ್ಟು, ಅವನಿಗೆ ತನ್ನ ಸ್ಟುಡಿಯೋದಲ್ಲಿ ಶಾಶ್ವತವಾದ ಪ್ರವೇಶ ನೀಡಿದ್ದನು.

ಹಗಿ ಸ್ಟುಡಿಯೋದ ಒಳಕ್ಕೆ ಬಂದಾಗ, ಟ್ರೆವರ್ ಭಿಕ್ಷುಕನೊಬ್ಬನ ಜೀವಂತಗಾತ್ರದ ಚಿತ್ರವೊಂದಕ್ಕೆ ಅದ್ಭುತ ಮುಕ್ತಾಯದ ಸ್ಪರ್ಶವೀಯುತ್ತಿದ್ದನು. ಭಿಕ್ಷುಕನೇ ಸ್ಟುಡಿಯೋದ ಮೂಲೆಯಲ್ಲಿದ್ದ ಕಟ್ಟೆಯೊಂದರ ಮೇಲೆ ನಿಂತಿದ್ದನು. ಕೃಶವಾಗಿದ್ದ ಆ ಮುದುಕ, ಮುದುಡಿದ ಕಾಗದದಂತಿದ್ದ ಮುಖದಲ್ಲಿ ತೀರಾ ದೈನ್ಯದ ಭಾವನೆ ತೋರುತ್ತಿದ್ದನು. ಆತನ ಹೆಗಲ ಮೇಲೆ ಒರಟಾದ ಬಟ್ಟೆಯೊಂದು ನೇತಾಡುತ್ತಿತ್ತು. ಅದು ಚಿಂದಿ ಚೂರಾಗಿತ್ತು. ಆತನ ದಪ್ಪ ಬೂಟುಗಳು ತೇಪೆಹಾಕಿ ಹೊಲೆಯಲ್ಪಟ್ಟಿದ್ದವು. ಒಂದು ಕೈಯಲ್ಲಿ ಆತ ಒಂದು ಒರಟು ದೊಣ್ಣೆಯನ್ನೊರಗಿ ನಿಂತಿದ್ದನು. ಮತ್ತೊಂದು ಕೈಯಲ್ಲಿ ಹರುಕಲಾದ ಹ್ಯಾಟನ್ನು ಮುಂಚಾಚಿ ಭಿಕ್ಷೆಗೆಂದು ಹಿಡಿದಿದ್ದನು.

**'ನಮ್ಮ ಕೆಲಸವೆಂದರೆ ಪ್ರಪಂಚ ಹೇಗಿದೆಯೆಂದು ತಿಳಿದಿದ್ದೇವೊ ಹಾಗೇ ಅದನ್ನು ಅರಿಯುವುದೇ ಹೊರತು ನಾವು ತಿಳಿದುಕೊಂಡಂತೆ ಅದನ್ನು ಸುಧಾರಿಸುವುದಿಲ್ಲ. ಈಗ ಹೇಳು ನಿನ್ನ ಲಾರಾ ಹೇಗಿದ್ದಾಳೆ? ಆ ಮುದುಕ ಮಾಡೆಲ್ ಅವಳ ಬಗ್ಗೆ ತುಂಬಾ ಆಸಕ್ತಿ ತೋರಿಸಿದ್ದಾನೆ...'**

'ಎಂಥ ಅದ್ಭುತವಾದ ಮಾಡೆಲ್' ಎಂದು ಸ್ನೇಹಿತನ ಕೈಕುಲುಕುತ್ತಾ ಹಗಿ ಪಿಸುಗುಟ್ಟಿದನು.

'ಅದ್ಭುತವಾದ ಮಾಡೆಲ್ಲಾ?' ಎಂದು ಟ್ರೆವರ್ ಎತ್ತರದ ಧ್ವನಿಯಲ್ಲಿ ಕೂಗಿದನು.

'ಖಂಡಿತಾ ನಿಜ. ಅಂಥ ಭಿಕ್ಷುಕರು ದಿನನಿತ್ಯ ದೊರಕುವವರಲ್ಲ. ನನ್ನ ಅದೃಷ್ಟ. ಈತನಿಂದ ಎಂಥ ಅದ್ಭುತ ಪ್ರತಿಕೃತಿಯನ್ನು ಸೃಷ್ಟಿಸಬಹುದಾಗಿದೆ!' ಪಾಪದ ಮನುಷ್ಯ ಎಷ್ಟು ದೀನನಾಗಿ ಕಾಣುತ್ತಿದ್ದಾನೆ. ಆದರೆ ನಿಮಗೆ ಚಿತ್ರಕಲಾವಿದರಿಗೆ ಇಂಥವರ ಮುಖವು ಒಂದು ನಿಧಿಯಲ್ಲವೇ?'

'ಖಂಡಿತವಾಗಿ' ಎಂದುತ್ತರಿಸಿದ ಟ್ರೆವರ್ 'ಒಬ್ಬ ಭಿಕ್ಷುಕ ಸಂತೋಷವಾಗಿ ಕಾಣುವುದು ನಿನಗೆ ಬೇಕಿಲ್ಲ ಅಲ್ಲವೇ?' ಎಂದು ಪ್ರಶ್ನಿಸಿದನು.

'ಒಮ್ಮೆ ಇಂಥದ್ದಕ್ಕೆ ಒಬ್ಬನು ಸಿದ್ಧನಾದಲ್ಲಿ, ಮಾಡೆಲ್‌ಗೆ ಎಷ್ಟು ಹಣ ದೊರಕಬಹುದು?' ಎಂದು ಕೇಳುತ್ತಾ ಹಗಿ, ಆರಾಮಾಗಿ ದಿವಾನ್ ಮೇಲೆ ಕುಳಿತುಕೊಂಡನು.

'ಒಂದು ಗಂಟೆಗೆ ಒಂದು ಷಿಲ್ಲಿಂಗ್.'

'ಒಂದು ಚಿತ್ರಕ್ಕೆ ನಿನಗೆಷ್ಟು ಹಣ ಸಿಕ್ಕುತ್ತದೆ ಟ್ರೆವರ್?'

'ಇದಕ್ಕೆ ನನಗೆ ಎರಡು ಸಾವಿರ ಸಿಕ್ಕುತ್ತದೆ.'

'ಪೌಂಡುಗಳಾ?'

'ಗಿನಿಯಾಗಳು. ಚಿತ್ರಕಲಾವಿದರು, ಕವಿಗಳು ಮತ್ತು ವೈದ್ಯರು ಯಾವಾಗಲೂ